ಅವರು ಮಾತನಾಡುವಾಗ ತೋರುವ ದೈಹಿಕ ಚಲನೆಗಳು ಮತ್ತು ಧ್ವನಿಯಲ್ಲಿನ ಏರಿಳಿತಗಳು ವಿಷಯದ ಮಂಡನೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತವೆ. ಆ ಕಾರಣಕ್ಕಾಗಿಯೇ ವೆಂಕಯ್ಯನಿಗೆ ಇಂಗ್ಲಿಷ್ ಭಾಷೆ ಅಷ್ಟು ಸೊಗಸಾಗಿ ಗೊತ್ತಿರದಿದ್ದರೂ, ಅವನು ಪ್ರಶ್ನೆಗಳಿಗೆ ಕೊಡುವ ಉತ್ತರಗಳು ನನ್ನನ್ನು ಹೆಚ್ಚು ಸಂತೃಪ್ತಿಗೊಳಿಸುತ್ತಿದ್ದವು. ಆದರೂ ಪದವಿಯ ಅಂಕಗಳು ಕಡಿಮೆ ಇವೆ ಎನ್ನುವುದನ್ನು ನಾವು ಗಮನಿಸಿದ್ದೇವೆ ಎಂದು ಅವನಿಗೆ ಗೊತ್ತಾಗಲಿ, ಆ ಕಾರಣದಿಂದಾಗಿ ಒಂದಿಷ್ಟು ಸಂಬಳದಲ್ಲಿ ಕಡಿತ ಮಾಡುವುದಕ್ಕೆ ಅವಕಾಶ ಸಿಗುತ್ತದೆ ಎಂಬ ದೂರಾಲೋಚನೆಯಿಂದ ಗೊಣಗುತ್ತಾ ನನ್ನ ಅನುಮಾನವನ್ನು ವ್ಯಕ್ತ ಪಡಿಸಿದ್ದೆ.

"ಮಿಸ್ಟರ್ ವೆಂಕಯ್ಯ, ನಮ್ಮ ಕಂಪೆನಿಯಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗೆ ಪದವಿಯಲ್ಲಿ ಕನಿಷ್ಠ ಶೇಕಡ ಎಪ್ಪತ್ತು ಅಂಕಗಳು ಬಂದಿರಬೇಕು. ನಿಮ್ಮ ಅಂಕಗಳು ಆ ನಿಯಮವನ್ನು ಮುಟ್ಟಿಲ್ಲ. ಈಗ ನನ್ನ ಏನು ಮಾಡು ಅಂತೀರಾ?" ಎಂದು ಅವನ ಮುಖವನ್ನು ಗಮನಿಸುತ್ತಾ ಕುಳಿತೆ.

"ಸಾರ್, ನಿಮಗೆ ಹೇಳುವಷ್ಟು ದೊಡ್ಡವನು ನಾನಲ್ಲ. ಶಿಕ್ಷಣ ಅನ್ನೋದು ಬರೀ ಪದವಿಯ ಅಂಕ ಪಟ್ಟಿ ಅಲ್ಲ ಅಲ್ವಾ ಸಾರ್? ಅನಂತರದ ನಾಲ್ಕು ವರ್ಷಗಳ ನೌಕರಿಯಲ್ಲಿ ನಾನು ಮೂರು ಪದವಿಗಾಗುವಷ್ಟು ಜ್ಞಾನವನ್ನು ಗಳಿಸಿದ್ದೀನಿ. ದಯವಿಟ್ಟು ಅದನ್ನ ಪರಿಗಣಿಸಿ" ಎಂದು ದೈನ್ಯತೆಯಲ್ಲಿ ಹೇಳಿದ.

"ನಿಮ್ಮ ಮಾತು ಒಪ್ತೀನಿ. ಆದರೂ ನಿಯಮಬಾಹಿರ ಅನ್ನೋದು ಮಾಡಬಹುದೇನ್ರಿ?"

"ಏನಾದ್ರೂ ಒಳ್ಳೇದು ಆಗುತ್ತೆ ಅಂದ್ರೆ ಒಂದಿಷ್ಟು ನಿಯಮಬಾಹಿರ ಕೆಲಸ ಮಾಡೋದ್ರಲ್ಲಿ ತಪ್ಪಿಲ್ಲ ಅಲ್ವಾ ಸಾರ್? ಅದೂ ಖಾಸಗಿ ಕಂಪೆನಿಗಳಲ್ಲಿ ಅಂತಹವಕ್ಕೆ ಅವಕಾಶ ಇದ್ದೇ ಇರುತ್ತೆ."

ಅವನ ಮಾತುಗಳು ಇಷ್ಟವಾಗುತ್ತಿದ್ದವು. ನಿಯಮಗಳು ಕಬ್ಬಿಣದ ಸಲಾಕೆಗಳಾಗಿ ನಮ್ಮ ನಡೆಯನ್ನೇ ಅಡ್ಡಿ ಪಡಿಸುವಂತಾಗಬಾರದು. ಅನೈತಿಕತೆಗೆ ಜಾರುವಷ್ಟು ನಿಯಮಗಳ ಉಲ್ಲಂಘನೆ ಮಾಡುವುದು ಸಮುದಾಯದ ಹಿತದೃಷ್ಟಿಯಿಂದ ತಪ್ಪಾಗುತ್ತದಾದರೂ, ಆಗೊಮ್ಮೆ ಈಗೊಮ್ಮೆ ಒಳಿತಿಗಾಗಿ ಗೆರೆಯನ್ನು ದಾಟುವುದು ಹೆಚ್ಚು ಸೂಕ್ತ.

ಆದರೂ ಈ ಆಯ್ಕೆಯ ಬಗ್ಗೆ ನನಗೆ ಒಂದು ಬಗೆಯ ಹಿಂಜರಿಕೆಯಿತ್ತು. ಸಂದರ್ಶನವನ್ನೆಲ್ಲಾ ಪೂರ್ತಿ ಮಾಡಿದ ನಂತರ 'ನಾಳೆ ಫಲಿತಾಂಶವನ್ನು ತಿಳಿಸುತ್ತೇವೆ' ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಹೇಳಿ, ಅವನನ್ನು ರಿಸೆಪ್ಷನ್ ಬಾಗಿಲ ತನಕ ಬೀಳ್ಕೊಡಲು ಕರೆದುಕೊಂಡು ಹೋದೆ. ಆದರೆ ವಿಚಿತ್ರವೆನ್ನುವಂತೆ ರಿಸೆಪ್ಷನ್ ಹಾಲಿನಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಆ ಘಟನೆ ಅವನನ್ನು ನಾನು ಕೆಲಸಕ್ಕೆ ತೆಗೆದುಕೊಳ್ಳಲೇ ಬೇಕು ಎಂದು ನಿರ್ಧರಿಸುವಷ್ಟು ಶಕ್ತಿಯುತವಾಗಿತ್ತು.

★★★

ಆಗಲೇ ರಾತ್ರಿ ಎಂಟು ಗಂಟೆಯಾಗಿತ್ತು. ಕಚೇರಿಯ ಸಿಬ್ಬಂದಿಯೆಲ್ಲಾ ಮನೆಗೆ ಹೋಗಿದ್ದರು. ರಿಸೆಪ್ಷನಿಸ್ಟ್ ಕೂಡಾ ಹೊರಟು ಹೋಗಿದ್ದಳು. ಆದರೆ ನಮ್ಮ ಕಂಪೆನಿಯ ಕಂಪ್ಯೂಟರೇತರ ಕೆಲಸಗಳನ್ನು ನೋಡಿಕೊಳ್ಳುವ ರಂಗಣ್ಣನವರು ಮಾತ್ರ ರಿಸೆಪ್ಷನ್ ಹಾಲಿನ ಮಧ್ಯ ಭಾಗದಲ್ಲಿ ಲೋಹದ ಅಂಕುಡೊಂಕಿನ ಚೂರುಗಳನ್ನು ಹರವಿಕೊಂಡು, ಚಿಂತಾಕ್ರಾಂತರಾಗಿ ಕುಳಿತಿದ್ದರು. ಯಾವುದೋ ಗಂಭೀರ ಸಮಸ್ಯೆಯೊಂದರಲ್ಲಿ ಮುಳುಗಿ ಹೋದಂತೆ ಕಾಣುತ್ತಿದ್ದರು. ಐವತ್ತರ ಆಸುಪಾಸಿನ ರಂಗಣ್ಣನವರು ನಮ್ಮ ಕಚೇರಿಯ ಬಹಳ ಹಿರಿಯ ಕೆಲಸಗಾರರು. ಸರಕಾರದ ಅಧಿಕಾರಿಗಳೊಡನೆ ಮಾತನಾಡುವುದು, ಕಂಪೆನಿಗೆ ಅಗತ್ಯವಾದ ಮಂಜೂರಾತಿಗಳನ್ನು ಮಾಡಿಸುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೇ ಕಂಪೆನಿಯ ಆರಂಭದ ದಿನಗಳಲ್ಲಿ